ಅಸಲು ದಾವೆ ನಂಃ 227/2019 ಡಿ.ಡಬ್ಲ್ಯೂಃ1 ಬಸವರಾಜ ಯಾವಗಲ್ಲ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 21-04-2023 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- 3 ನೇ ಪ್ರತಿವಾದಿ ಪರ ಶ್ರೀ. ವಿ ಎಸ್ ಬಿ ವಕೀಲರಿಂದಃ**

ನಾನು ಈ ದಾವೆಯಲ್ಲಿ 3 ನೇ ಪ್ರತಿವಾದಿಯ ಜಿ ಪಿ ಎ ಹೋಲ್ಡರ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು , ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಕೆಲವೊಂದು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಈ ದಿನ ಹಾಜರು ಮಾಡುತ್ತಿದ್ದೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರತಿಸಬೇಕಾಗಿ ಪ್ರಾರ್ಥನೆ .

**3 ನೇ ಪ್ರತಿವಾದಿಯ ದಾಖಲೆಗಳನ್ನು ಈ ಕೆಳಕಂಡತೆ ನಿಶಾನೆಗಳಾಗಿ ಗುರುತಿಸಲಾಯಿತು.**

| | |
|---|---|
| ನಿಡಿಃ 1 | ದಿಃ 16/07/2022 ರಂದು ಗಣಪತಿ ಯಾವಗಲ್ಲ ನನಗೆ ಬರೆದುಕೊಟ್ಟಂತಹ ಮೊಕ್ತಿಯಾರ ಪತ್ರ |
| ನಿಡಿಃ 2 | ಮೆಣಸಗಿ ಗ್ರಾಮದ ಸರ್ವೇ ನಂ.53/1 ಜಮೀನಿನ ಆರ್ ಟಿ ಸಿ |
| ನಿಡಿಃ 3 | ದಿಃ 11/06/1992 ರಂದು ಆದಂತಹ ಖರೀದಿ ಪತ್ರದ ದೃಢೀಕೃತ ನಕಲು (ಮೂಲ ಪತ್ರ ಅಸಲು ದಾವೆ ನಂ.1/2020 ರಲ್ಲಿ ನಾನು ಸಲ್ಲಿಸಿರುತ್ತೇನೆ.) |
| ನಿಡಿಃ 4 | ಡ.ನಂ.3373 ರ ಮ್ಯೂಟೇಷನ ಎಕ್ಸಟ್ರ್ಯಾಕ್ಟನ ದೃಢೀಕೃತ ನಕಲು |
| ನಿಡಿಃ 5 | ಅಸಲು ದಾವೆ ನಂ.183/2014 ರಲ್ಲಿನ ಆದೇಶ ಪುಟದ ದೃಢೀಕೃತ ನಕಲು |
| ನಿಡಿಃ 6 | ಅಸಲು ದಾವೆ ನಂ.183/2014 ರಲ್ಲಿನ ವಾದ ಪತ್ರದ ದೃಢೀಕೃತ ನಕಲು |
| ನಿಡಿಃ 7 | ಅಸಲು ದಾವೆ ನಂ.183/2014 ರಲ್ಲಿನ 1 ನೇ ಪ್ರತಿವಾದಿಯ ಪ್ರತಿವಾದ ಪತ್ರದ ದೃಢೀಕೃತ ನಕಲು |
| ನಿಡಿಃ 8 | ಅಸಲು ದಾವೆ ನಂ.183/2014 ರಲ್ಲಿನ 2 ನೇ ಪ್ರತಿವಾದಿಯ ಪ್ರತಿವಾದ ಪತ್ರದ ದೃಢೀಕೃತ ನಕಲು |

ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ- ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**